**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**<u>C.C. No. 711/2017</u>**

**CW- 2** **PW: 1**

ಸಾಕ್ಷಿಯ ಹೆಸರು : ಗಂಗಪ್ಪಾ
ತಂದೆ /ಗಂಡನ ಹೆಸರು : ದ್ಯಾಮಪ್ಪಾ ಅವರಾದಿ
ವಯಸ್ಸು : 61 ವರ್ಷ
ಉದ್ಯೋಗ : ವ್ಯವಸಾಯ
ವಾಸಸ್ಥಳ : ಗಾಮನಗಟ್ಟಿ, ಹುಬ್ಬಳ್ಳಿ.

**ದಿಃ 27.12.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ :**

ಸಾಕ್ಷಿಗೆ ಸ್ಥಳ ಮಹಜರನ್ನು ತೋರಿಸಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸದರಿ ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಎಲ್ಲಿ ಯಾವಾಗ ಮತ್ತು ಯಾವ ವಿಷಯಕ್ಕೆ ಸಂಬಂದಪಟ್ಟಂತೆ ಮಾಡಿದ್ದೇನೆ ಎಂದು ಈಗ ನನಗೆ ನೆನಪಿಲ್ಲಾ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ.

ಅದೇ ದಿನ ಆರೋಪಿಯ ಹೆಬ್ಬಟ್ಟಿನ ಗುರುತಿಗೆ ನಿಮ್ಮ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿ. ಸದರಿ ಸಹಿಯನ್ನು ಎಲ್ಲಿ ಮತ್ತು ಯಾವಾಗ ಮಾಡಿದ್ದೀರಿ ಎಂದರೆ ನನಗೆ ನೆನಪಿಲ್ಲಾ. ಪೋಲಿಸರು ಸಹಿ ಮಾಡು ಎಂದು ಹೇಳಿದ್ದಕ್ಕೆ ಸಹಿ ಮಾಡಿದ್ದೇನೆ ಎಂದು ಹೇಳುತ್ತಾರೆ. ಸದರಿ ದಾಖಲಾತಿಯನ್ನು ನಿಪಿ 2 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ದಿಃ 07-03-2012 ರಂದು ಮಧಾಹ್ನ 2-45 ರಿಂದ 3-45 ಗಂಟೆಯವರೆಗೆ ಅಮರಗೋಳದ ಕೆರಿ ಓಣಿಯಲ್ಲಿರುವ ಫಿರ್ಯಾದಿಯ ಮನೆಯೊಳಗೆ ನಿಮ್ಮನ್ನು ಕರೆದುಕೊಂಡು ಹೋಗಿ ಪ್ರಕರಣದ ಎಲ್ಲಾ

ವಿಷಯ ತಿಳಿಸಿ ಪಂಚರನ್ನಾಗಿ ಬನ್ನಿ ಎಂದು ಕರೆದಿದ್ದಕ್ಕೆ ನೀವು ಹಾಜರಿದ್ದು ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಪೋಲಿಸರು ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲಾ. ಆ ಸಮಯದಲ್ಲಿ ನಿಮ್ಮ ಜೊತೆ ಚಾಸಾ 3 ರವರು ಸಹ ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲಾ.

ಅದೇ ದಿನ ಮಧ್ಯಾಹ್ನ 1-45 ರಿಂದ 2-30 ರ ವರೆಗೆ ಚಾಸಾ 1 ರವರ ಮನೆಯೊಳಗಿರುವ ವಸ್ತುಗಳ ಮೇಲಿರುವ ಬೆರಳು ಮುದ್ರೆಯ ಸಾಕ್ಷ್ಯವನ್ನು ಕಲೆ ಹಾಕಿದ ಬಗ್ಗೆ ಪಂಚನಾಮೆ ಬರೆದಿದ್ದು ಆ ಸಮಯದಲ್ಲಿ ನೀವು ಹಾಜರಿದ್ದು ಅದಕ್ಕೆ ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲಾ, ಆ ಸಮಯದಲ್ಲೂ ಸಹ ನನ್ನ ಜೊತೆ ಚಾಸಾ 3 ರವರು ಇದ್ದರು ಎಂದರೆ ಸರಿಯಲ್ಲಾ. ಈ ಎಲ್ಲಾ ವಿಷಯ ಗೊತ್ತಿದ್ದರೂ ಸಹ ನೀವು ಸ್ಥಳದಲ್ಲಿ ನಿಪಿ 1 ಮತ್ತು 2 ಕ್ಕೆ ಸಹಿ ಹಾಕಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲಾ.

**ಮುಂದಿನ ಮುಖ್ಯ ವಿಚಾರಣೆ ಇಲ್ಲಾ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**(ಶ್ರೀಮತಿ ಪದ್ಮಶ್ರೀ ಆರ್. ಪಾಟೀಲ)**
**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**